ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

ಎಸ್.ಸಿ. ಸಂಖ್ಯೆ: 1334/2023

ಚಾ.ಸಾ-5 ಫ್ರಾ.ಸಾ-1

ದಿಃ 20.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಸಿ.ಎಸ್. ಯಶವಂತ್ |
| ತಂದೆ ಹೆಸರು | ಸಿ.ಬಿ. ಸೀತೇಗೌಡ |
| ವಯಸ್ಸು | 49 ವರ್ಷ |
| ವೃತ್ತಿ | ಎ.ಎಸ್.ಐ. |
| ವಿಳಾಸ | ಜೆ.ಸಿ. ನಗರ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು 2017 ರಿಂದ 2020 ರವರೆಗೆ ವಿಜಯನಗರ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ. 7088 ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 03.01.2018 ರಂದು ನಾನು ಚಾ.ಸಾ- 1 ರವರ ಜೊತೆಯಲ್ಲಿ ರಾತ್ರಿ ಗಸ್ತು ಕರ್ತವ್ಯದಲ್ಲಿದ್ದೆ. ಆಗ ರಾತ್ರಿ 9.20 ರ ವೇಳೆಗೆ ಚಾ.ಸಾ- 1 ರವರಿಗೆ ಬಾತ್ಮಿದಾರರಿಂದ ಉಮಿಯ ಭವನ್ ಬಳಿ 4-5 ಜನರು ದರೋಡೆಗೆ ಹೊಂಡು ಹಾಕುತ್ತಿರುವುದಾಗಿ ಫೋನ್ ಮೂಲಕ ಮಾಹಿತಿ ಬಂದಿತ್ತು. ಅದರಂತೆ ಚಾ.ಸಾ- 1 ರವರು ಚಾ.ಸಾ- 4, ಚಾ.ಸಾ- 6, ಚಾ.ಸಾ- 7 ರವರಿಗೆ ಕರೆಮಾಡಿ ಅವರಿಗೆ ಕೂಡಲೇ ಉಮಿಯ ಭವನ್ ಬಳಿ ಬರುವಂತೆ ಮತ್ತು ಇಬ್ಬರು

ಪಂಚರನ್ನು ಕರೆದುಕೊಂಡು ಬರುವಂತೆ ಸೂಚಿಸಿದ್ದರು.

3. ಬಳಿಕ ನಾನು ಮತ್ತು ಚಾ.ಸಾ- 1 ರವರು ರಾತ್ರಿ ಸುಮಾರು 9.30 ರ ವೇಳೆಗೆ ಸ್ಥಳಕ್ಕೆ ಹೋಗಿದ್ದೆ. ಅಷ್ಟರಲ್ಲಿ ಸಿಬ್ಬಂದಿಗಳು ಪಂಚರೊಂದಿಗೆ ಅಲ್ಲಿಗೆ ಬಂದಿದ್ದರು. ನಂತರ ನಾವು ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ಗಮನಿಸಿ ಬಾತ್ಮಿಯನ್ನು ಖಾತ್ರಿ ಪಡಿಸಿಕೊಂಡಿರುತ್ತೇವೆ. ನಂತರ ನಾವು ದಾಳಿ ಮಾಡಿ ಸ್ಥಳದಲ್ಲಿ ಇದ್ದ ವ್ಯಕ್ತಿಗಳಲ್ಲಿ ಮೂವರನ್ನು ಹಿಡಿದಿರುತ್ತೇವೆ. ಇತರ ಇಬ್ಬರು ವ್ಯಕ್ತಿಗಳು ದಾಳಿ ವೇಳೆಗೆ ತಪ್ಪಿಸಿಕೊಂಡು ಹೋಗಿರುತ್ತಾರೆ.

4. ನಾವು ಹಿಡಿದುಕೊಂಡ ವ್ಯಕ್ತಿಗಳ ಬಳಿ ಒಂದು ಲಾಂಗ್, 2 ಮರದ ದೊಣ್ಣೆಗಳು ಮತ್ತು ಒಂದು ಖಾರದ ಪುಡಿ ಪೊಟ್ಟಣ ಕಂಡುಬಂದಿತ್ತು. ಚಾ.ಸಾ- 1 ರವರು ಸದರಿ ವ್ಯಕ್ತಿಗಳನ್ನು ವಿಚಾರಿಸಿ ಅವರ ಹೆಸರು ಮತ್ತು ವಿವರ ಹಾಗೂ ಓಡಿ ಹೋದ ವ್ಯಕ್ತಿಗಳ ವಿವರಗಳನ್ನು ಪಡೆದುಕೊಂಡಿರುತ್ತಾರೆ. ಚಾ.ಸಾ- 1 ರವರು ಸ್ಥಳದಲ್ಲಿ ಮಹಜರ್ ಮಾಡಿ ಆರೋಪಿಗಳ ಬಳಿ ಕಂಡುಬಂದ ಸ್ವತ್ತುಗಳನ್ನು ಅಮಾನತುಪಡಿಸಿಕೊಂಡಿದ್ದರು. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ಮಹಜರ್ ಆಗಿದೆ. ಇದನ್ನು ನಿ.ಪಿ- 1 ಎಂದು ಗುರುತಿಸಲಾಯಿತು.

5. ನಂತರ ನಾವು ಆರೋಪಿಗಳು ಮತ್ತು ಅಮಾನತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಅವರನ್ನು ಚಾ.ಸಾ- 9 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಾನು ದಾಳಿ ವೇಳೆಗೆ ಸಹಕರಿಸಿದ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಮಹಜರ್

ಕಾಲದಲ್ಲಿ ಅಮಾನತುಪಡಿಸಿಕೊಂಡ ಸ್ವತ್ತುಗಳನ್ನು ಗುರುತಿಸಬಲ್ಲೆ. ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಸೀಲು ಮಾಡಲಾದ ಸ್ಥಿತಿಯಲ್ಲಿರುವ ಸ್ವತ್ತುಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಸಂಬಂಧಿತ ಸ್ವತ್ತುಗಳು ಎಂದು ಗುರುತಿಸಿರುವ ಒಂದು ಲಾಂಗ್, ಎರಡು ದೊಣ್ಣೆಗಳು ಮತ್ತು ಒಂದು ಖಾರದ ಪುಡಿ ಪೊಟ್ಟಣವನ್ನು ಕ್ರಮವಾಗಿ ಮು.ಮಾ- 1 ರಿಂದ ಮು.ಮಾ- 4 ಎಂದು ಗುರುತಿಸಲಾಯಿತು. ದಾಳಿ ವೇಳೆಗೆ ಸ್ಥಳದಲ್ಲಿ ಇದ್ದ ಆರೋಪಿಗಳನ್ನು ಗುರುತಿಸಬಲ್ಲೆ. ಅವರಲ್ಲಿ ಇಬ್ಬರು ಆರೋಪಿಗಳು ಈ ದಿನ ವಿ.ಸಿ. ಮೂಲಕ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

ಆರೋಪಿಗಳ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆರೋಪಿಗಳು ತಾವು ಸಾಕ್ಷಿಯನ್ನು ಪಾಟಿಸವಾಲಿಗೆ ಒಳಪಡಿಸುವುದಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಆರೋಪಿಗಳ ಪರ ಪಾಟಿಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

ಮರುವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.